


## ಪಕ್ಷಿಗಳ ಬಗ್ಗೆ ಇರಲಿ ಕಾಳಜಿ

ಮನೆಯ ಕಾಂಪೌಂಡ್ ಮೇಲೆ ಎರಡ್ಮೂರು ಮಣ್ಣಿನ ಪಾತ್ರೆಗಳಲ್ಲಿ ನೀರು ಹಾಗೂ ಪ್ಲೇಟ್‌ಗಳಲ್ಲಿ ಒಂದಷ್ಟು ಕಾಳುಗಳು, ಹಣ್ಣು ಹಂಪಲುಗಳನ್ನು ತುಂಬಿ ಇಡುವುದು ನನ್ನ ಹವ್ಯಾಸ. ಅದನ್ನು ಹಕ್ಕಿಗಳು ತಿಂದುಂಡು ಕುಡಿದು, ಅದೇ ನೀರಲ್ಲಿ ಜಳಕವನ್ನೂ ಮಾಡಿಕೊಂಡು ಪುರ್ರನೆ ಹಾರಿಹೋಗುವುದನ್ನು ನೋಡಿ ಕಣ್ತುಂಬಿಕೊಳ್ಳುವುದೇ ನನಗೊಂದು ಸಂಭ್ರಮ, ಸಡಗರ. ಬಾಳೆಹಣ್ಣು, ಕಿತ್ತಳೆ, ಪಪಾಯಿ ಸೇರಿದಂತೆ ಮುಂತಾದ ಹಣ್ಣುಗಳನ್ನು ಸವಿಯಲು ಏಷ್ಯನ್ ಕೋಯಲ್, ಪಿಕಳಾರ, ದಾಸವಾಳ ಹಕ್ಕಿ, ವಿವಿಧ ಬಗೆಯ ಚಿಟ್ಟೆಗಳು, ಜೇನು ನೊಣಗಳೂ ಬರುವುದುಂಟು. ಪಕ್ಷಿಗಳಿಗೆ ತಿನ್ನಲು ಸರಿಯಾದ ಆಹಾರ ದೊರಕದಿರುವ ವಾತಾವರಣವಿದೆ. ಹೀಗಿರುವಾಗ, ಮನುಷ್ಯರಾದ ನಾವೆಲ್ಲರೂ ಅವುಗಳ ಪರಿಸ್ಥಿತಿಯನ್ನು ಅರಿತು, ಅವುಗಳಿಗೆ ಸಾಧ್ಯವಾಗುವ ಎಲ್ಲೆಡೆ ಆಹಾರ ಒದಗಿಸಬೇಕಿರುವುದು ನಮ್ಮ ಜವಾಬ್ದಾರಿ ಆಗಬೇಕಿದೆ. ನಾನು ಮಾಡಿದ್ದೇನೆ, ಮಾಡುತ್ತಿದ್ದೇನೆ. ಇನ್ನೇನಿದ್ದರೂ ನಿಮ್ಮ ಸರದಿ.

–ಚನ್ನಬಸವ ಪುತ್ತೂರ್ಕರ, ಉಡುಪಿ



## ಅಲೋವೆರಾ ಹೂ!

ಸೌಂದರ್ಯವರ್ಧಕವಾಗಿ ಬಳಕೆ ಮಾಡುವ ಅಲೋವೆರಾ ಬಹುತೇಕರ ಕೈತೋಟದಲ್ಲಿ ಇರುತ್ತದೆ. ಆದರೆ ಅಲೋವೆರಾ ಹೂ ಬಿಟ್ಟಿರುವುದನ್ನು ನೋಡಿದವರು ಕಡಿಮೆ ಎನ್ನಬಹುದು. ತಿಂಗಳ ಹಿಂದೆ ನಮ್ಮ ಮನೆಯ ಕೈತೋಟದಲ್ಲಿ ಅಲೋವೆರಾ ಹೂ ಬಿಡುವ ಮೂಲಕ ಅಚ್ಚರಿ ಉಂಟು ಮಾಡಿತು. ಅಲೋವೆರಾ ಗಿಡದ ಬುಡದಿಂದ ಸುಮಾರು ಎರಡು ಮೂರು ಅಡಿ ಎತ್ತರಕ್ಕೆ ಕೊಳವೆಯ ರೀತಿಯ ರಚನೆ ಮೇಲೆದ್ದು ಅದರ ತುದಿಯಲ್ಲಿ ಕೇಸರಿ ಹಳದಿ ಮಿಶ್ರ ಬಣ್ಣದ ಹೂವುಗಳು ಕಂಡವು. ಈ ಬಗ್ಗೆ ಒಂದಷ್ಟು ಮಾಹಿತಿಗಾಗಿ ಹುಡುಕಾಡಿದಾಗ, ಅಲೋವೆರಾ ಗಿಡ ನಾಲ್ಕು ವರ್ಷದ ಬಳಿಕ ಹೂ ಬಿಡುತ್ತದೆ. ಹೂಗಳನ್ನು ಹಾಗೆಯೇ ಬಿಟ್ಟರೆ ಅವುಗಳು ಕಾಯಿ ಆಗುತ್ತವೆ. ಬಿಸಿಲಿನ ವಾತಾವರಣದಲ್ಲಿ ಬೆಳೆದ ಗಿಡಗಳು ಮಾತ್ರ ಹೂ ಬಿಡುತ್ತವೆ ಎನ್ನುವ ವಿಚಾರ ತಿಳಿಯಿತು. ಈ ಹೂವುಗಳು ಎರಡು ಮೂರು ವಾರಗಳ ಕಾಲ ಇರುತ್ತವೆ.

–ಅರುಣ್ ಕಿಲ್ಲೂರು

## ಮಣ್ಣಿನ ಜೇನು ಪೆಟ್ಟಿಗೆ

ಸಾಮಾನ್ಯವಾಗಿ ಜೇನು ಸಾಕಾಣಿಕೆಯಲ್ಲಿ ತೊಡಗಿಕೊಂಡ ಕೃಷಿಕರು ಮರದ ತುಂಡಿನಿಂದ ಸಿದ್ಧಪಡಿಸಿದ ವ್ಯವಸ್ಥಿತ ‘ಪೆಟ್ಟಿಗೆ’ಯಲ್ಲಿಯೇ ಸಾಕುತ್ತಾರೆ. ಹಲವು ದೃಷ್ಟಿಕೋನದಲ್ಲಿ ಈ ಪೆಟ್ಟಿಗೆ ಅನುಕೂಲ. ಹೀಗಾಗಿ, ಪೆಟ್ಟಿಗೆಗಳಲ್ಲೇ ಹೆಚ್ಚಿನ ಜನ ಜೇನು ಕೃಷಿ ಮಾಡುತ್ತಿದ್ದಾರೆ.

ಮಲೆನಾಡಿನ ಪ್ರದೇಶದಲ್ಲಿ ‘ಮಿಶ್ರಿ ಜೇನು’ ಸಾಕುವವರು ಮರದ ಪೆಟ್ಟಿಗೆ, ಮಣ್ಣಿನ ಪೆಟ್ಟಿಗೆ, ಅಡಿಕೆ ಮರದ ತುಂಡುಗಳನ್ನು ಸಹ ಉಪಯೋಗಿಸುತ್ತಾರೆ. ಅಂಥವರಲ್ಲಿ ಹಿತ್ಲಳ್ಳಿಯ ಹರಿಹರ ವೆಂ. ಹೆಗಡೆ ಸಹಾ ಒಬ್ಬರು. ಇವರು ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಉಮ್ಮಚ್ಗಿ ಹತ್ತಿರದ ಹಿತ್ಲಳ್ಳಿಯ ಬಾಳೆಮನೆಯವರು. ಹರಿಹರ ಹೆಗಡೆ ಅವರಿಗೆ ಅಲ್ಪ ಪ್ರಮಾಣದಲ್ಲಿ ಅಡಿಕೆ ತೋಟವಿದೆ. ಆ ಭೂಮಿಯನ್ನು ಸಾಗುವಳಿ ಮಾಡುತ್ತಾ, ಜೇನು ಕೃಷಿಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಹಿತ್ಲಳ್ಳಿಯ ಹರಿಹರ ಹೆಗಡೆ ಅವರು ಬಹಳ ಆಸಕ್ತಿ, ಛಲ, ವಿಶ್ವಾಸದಿಂದ ಈ ಜೇನು ಕೃಷಿಯಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಇವರದ್ದು ನೂರಾರು ಜೇನಿನ ಪೆಟ್ಟಿಗೆಯಿದ್ದರೂ, ಸದ್ಯ 35ರಿಂದ 40 ಪೆಟ್ಟಿಗೆಯಲ್ಲಿ ಮಾತ್ರವೇ ಜೇನಿನ ಹುಳವಿದೆ. ಇವರು ತುಡವಿ ಜೇನಲ್ಲದೇ, ಮಿಶ್ರಿ ಜೇನನ್ನು ಸಹಾ ಸಾಕಿದ್ದಾರೆ. ಸಾಮಾನ್ಯವಾಗಿ ಈ ಭಾಗದಲ್ಲಿ ಮಿಶ್ರಿ ಜೇನನ್ನು ಮರದ ಪುಟ್ಟ ದಿಮ್ಮಿಯಲ್ಲಿ ಸಾಕುವವರೇ ಹೆಚ್ಚು. ಆದ್ರೇ, ಬಾಳೆಮನೆಯ ಹರಿಹರ ಹೆಗಡೆ ಮಣ್ಣಿನಿಂದ ಸಿದ್ಧಪಡಿಸಿದ ಪೆಟ್ಟಿಗೆಯಲ್ಲಿ ‘ಮಿಶ್ರಿ ಜೇನ’ನ್ನು ಸಾಕುತ್ತಿರುವುದು ವಿಶೇಷ. ಈ ಮಣ್ಣಿನ ಪೆಟ್ಟಿಗೆ ನಿನ್ನೆಮೊನ್ನೆ ಸಿದ್ಧಪಡಿಸಿದ್ದಲ್ಲ. 2001ರಲ್ಲಿ ಪ್ರಯೋಗಾರ್ಥವಾಗಿ ಈ ಮಣ್ಣಿನ ಪೆಟ್ಟಿಗೆಯನ್ನು ತಮ್ಮ ಕಲ್ಪನೆಯಲ್ಲಿ ತಯಾರಿಸಿದ್ದಾರೆ. ಎರಡು ಅಂತಸ್ತನ್ನು ಹೊಂದಿರುವ ಈ ಮಣ್ಣಿನ ಜೇನು ಪೆಟ್ಟಿಗೆ ಈಗಲೂ ಸುಸ್ಥಿತಿಯಲ್ಲಿದೆ.

ಮಿಶ್ರಿ ಜೇನಿನ ಹುಳ ಈ ಪೆಟ್ಟಿಗೆಯಲ್ಲಿದ್ದು, ತಮ್ಮ ಸಂಸಾರವನ್ನು ಹೂಡಿಕೊಂಡು ತುಪ್ಪ ತಯಾರಿಸುತ್ತವೆ. ಮರದ/ ಬಾಂಬುಗಳ ಪೆಟ್ಟಿಗೆಗಿಂತಲೂ ಮಣ್ಣಿನ ಪೆಟ್ಟಿಗೆ ಬಹಳ ತಂಪು. ವಿಪರೀತ ಮಳೆ, ಚಳಿಯಿರಲಿ; ಮೈ ಸುಡುವ ಬಿಸಿಲೇ ಇರಲಿ... ಅದ್ಯಾವುದೂ ಮಣ್ಣಿನ ಪೆಟ್ಟಿಗೆಯಲ್ಲಿ ಸಂಸಾರ ಹೂಡಿರುವ ಜೇನಿನ ಹುಳುವಿಗೆ ಸಮಸ್ಯೆಯೇನು ಆಗಲಾರದು. ಆದ್ರೆ, ಮಳೆ ಬೀಳುವ ಸ್ಥಳದಿಂದ ದೂರವಿಟ್ಟುಕೊಂಡರೆ ಅನೇಕ ವರ್ಷಗಳ ಕಾಲ ಮಣ್ಣಿನ ಪೆಟ್ಟಿಗೆಯನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳಬಹುದು. ನನ್ನಲ್ಲಿರುವ ಈ ಪೆಟ್ಟಿಗೆಗೆ ಹದಿನಾರು ವರ್ಷವಾಯ್ತು. ಈಗಲೂ ಸುಸ್ಥಿತಿಯಲ್ಲಿದೆ ಎಂದು ಹರಿಹರ ಹೆಗಡೆ ವಿಶ್ವಾಸ ವ್ಯಕ್ತಪಡಿಸುತ್ತಾರೆ.

–ಗಣಪತಿ ಹಾಸ್ಪುರ, ಯಲ್ಲಾಪುರ

